**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ..ದಂ.ರವರ ನ್ಯಾಯಾಲಯ, ಗುಬ್ಬಿ.**

**ಉಪಸ್ಥಿತರು : ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ. ಎಲ್., ಎಲ್.ಎಲ್.ಬಿ.,**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಗುಬ್ಬಿ.

**ದಿನಾಂಕಃ 04 ನೇ ಜುಲೈ 2026**

**ಅಸಲು ದಾವಾ ಸಂಖ್ಯೆಃ 16/2026**

**ವಾದಿ/ಯರುಃ**

**ಶ್ರೀ ಬೋರೇಗೌಡ ಬಿನ್ ನಿಂಗೇಗೌಡ ಉರುಫ್ ನಿಂಗಣ್ಣ,**
ಸುಮಾರು 41 ವರ್ಷ ವಯಸ್ಸು,
ವಾಸಃ ಮತ್ತಿಕೆರೆ ಗ್ರಾಮ, ಇಡಗೂರು ಪೋಸ್ಟ್, ಸಿ.ಎಸ್.ಪುರ ಹೋಬಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

**(ಪ್ರತಿನಿಧಿಸುವವರುಃ ಶ್ರೀ ಬಿ.ಆರ್.ಎಸ್.,ವಕೀಲರು)**

**-ವಿರುದ್ಧ-**

**ಪ್ರತಿವಾದಿ/ಯರುಃ**

1. **ಮುಖ್ಯ ಕಾರ್ಯದರ್ಶಿ,**
   ಕರ್ನಾಟಕ ಸರ್ಕಾರ, ವಿಧಾನ ಸೌಧ,
   ಬೆಂಗಳೂರು.

2. **ಜನನ ಮತ್ತು ಮರಣ ನಿಬಂಧಕರು,**
   ತಹಶೀಲ್ದಾರರು,
   ಗುಬ್ಬಿ ತಾಲ್ಲೂಕು, ಗುಬ್ಬಿ.

3. **ಪೊಲೀಸ್ ನಿರೀಕ್ಷಕರು,**
   ಸಿ.ಎಸ್.ಪುರ ಪೊಲೀಸ್ ಠಾಣೆ, ಗುಬ್ಬಿ ತಾಲ್ಲೂಕು,
   ತುಮಕೂರು ಜಿಲ್ಲೆ.

**(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ವಕೀಲರು)**

| | | | | |
|---|---|---|---|---|
| 1 | ದಾವಾ ದಾಖಲಿಸಿದ ದಿನಾಂಕ | 06.01.2026 | | |
| 2 | ದಾವಾ ಸ್ವರೂಪ | ಘೋಷಣಾತ್ಮಕ ಹಾಗೂ ನಿರ್ದೇಶನಾತ್ಮಕ ನಿರ್ಬಂಧಕಾಜ್ಞೆ | | |
| 3 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 08.06.2026 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 04.07.2026 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 00 | 05 | 29 |

SAVITHARANI H V
Digitally signed by SAVITHARANI H V
Date: 2026.07.04 17:16:48 +0530
(ಸವಿತರಾಣಿ ಹೆಚ್.ವಿ)
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಗುಬ್ಬಿ.

:: **ತೀರ್ಪು** ::

ಪ್ರಸ್ತುತ ಈ ದಾವೆಯನ್ನು ವಾದಿಯು ಘೋಷಣಾತ್ಮಕ ಹಾಗೂ ನಿರ್ದೇಶನಾತ್ಮಕ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿ ವಾದಿಯ ತಂದೆಯಾದ ನಿಂಗೇಗೌಡ ಉರುಫ್ ನಿಂಗಣ್ಣ ಬಿನ್ ಬೋರೇಗೌಡ ರವರು ಕಾನೂನಾತ್ಮಕವಾಗಿ ಮೃತರಾಗಿದ್ದಾರೆ ಎಂದು ಘೋಷಿಸಬೇಕೆಂದು ಹಾಗೂ ವಾದಿಯ ತಂದೆಯ ಮರಣದ ನಮೂದನ್ನು ಜನನ ಮತ್ತು ಮರಣಗಳ ರಿಜಿಸ್ಟರ್ ನಲ್ಲಿ ದಾಖಲಿಸಿ ಮರಣ ಪ್ರಮಾಣ ಪತ್ರವನ್ನು ನೀಡಲು 2ನೇ ಪ್ರತಿವಾದಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

**2. ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ:-**

ವಾದಿಯು ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಸಿ.ಎಸ್. ಪುರ ಹೋಬಳಿ, ಮತ್ತಿಕೆರೆ ಗ್ರಾಮದ ಲೇಟ್ ಬೋರೇಗೌಡರ ಮಗನಾದ ನಿಂಗೇಗೌಡ @ ನಿಂಗಣ್ಣ ಎಂಬುವವರ

ಮಗನಾಗಿದ್ದಾರೆ. ವಾದಿಯ ತಂದೆಯಾದ ನಿಂಗೇಗೌಡ @ ನಿಂಗಣ್ಣ ಬಿನ್ ಲೇಟ್ ಬೋರೇಗೌಡ ಅವರು ಸುಮಾರು 2011 ರ ವರ್ಷದಲ್ಲಿ ಎಲ್ಲೋ ಮನೆಯಿಂದ ಹೊರಗೆ ಹೋದವರು ಇದುವರೆಗೆ ಮನೆಗೆ ಹಿಂತಿರುಗಿ ಬಂದಿರುವುದಿಲ್ಲ. ಅವರ ಪತ್ತೆಗಾಗಿ ಸಂಬಂಧಿಕರು ಮತ್ತು ಸ್ನೇಹಿತರ ಮನೆಗಳಲ್ಲಿ ದೀರ್ಘಕಾಲ ಹುಡುಕಾಡಿದರೂ ಅವರು ಪತ್ತೆಯಾಗಿಲ್ಲ.

ವಾದಿಯು ದಿನಾಂಕ 14-12-2019 ರಂದು ಮಧ್ಯಾಹ್ನ ಸುಮಾರು 2-30 ಕ್ಕೆ 3ನೇ ಪ್ರತಿವಾದಿಗೆ ನಾಪತ್ತೆಯಾದ ಬಗ್ಗೆ ದೂರು ನೀಡಿದ್ದಾರೆ. ವಾದಿಯು ನೀಡಿದ ದೂರಿನ ಮೇರೆಗೆ 3ನೇ ಪ್ರತಿವಾದಿಯು ವಾದಿಯ ತಂದೆಯ ನಾಪತ್ತೆಗೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 76/2019 ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ. ವಾದಿಯ ತಂದೆಯ ಪತ್ತೆಗಾಗಿ ತೀವ್ರ ಹುಡುಕಾಟ ನಡೆಸಿದಾಗ್ಯೂ ಅವರು ಪತ್ತೆಯಾಗಿಲ್ಲ. 3ನೇ ಪ್ರತಿವಾದಿಯು ರಾಜ್ಯದಾದ್ಯಂತ ಇರುವ ಎಲ್ಲಾ ಪೊಲೀಸ್ ಠಾಣೆಗಳಿಗೂ ವಾದಿಯ ತಂದೆಯ ಪತ್ತೆಗಾಗಿ ಪ್ರಕಟಣೆ ಕಳುಹಿಸಿದ್ದಾರೆ. ದಿನಪತ್ರಿಕೆಗಳಲ್ಲೂ ಈ ಬಗ್ಗೆ ಪ್ರಕಟಣೆ ನೀಡಲಾಗಿದೆ. ಆದ್ದರಿಂದ, 3ನೇ ಪ್ರತಿವಾದಿಯು ಈ ದಾಖಲೆಯನ್ನು ಸದ್ಯಕ್ಕೆ ಪತ್ತೆಯಾಗದ ಪ್ರಕರಣಗಳ ಕಡತ ಎಂದು ನಿಶ್ಚಲ ಕಡತದಲ್ಲಿ ಇಟ್ಟು ಮುಚ್ಚಿದ್ದಾರೆ.

ವಾದಿಯ ತಂದೆಯು 2011 ರಿಂದ ಇಂದಿನವರೆಗೂ ನಾಪತ್ತೆಯಾಗಿದ್ದು ಅವರನ್ನು ಹುಡುಕಲು ಬಹಳಷ್ಟು ಪ್ರಯತ್ನಗಳನ್ನು ಮಾಡಿದ ನಂತರವೂ ಅವರು ಪತ್ತೆಯಾಗಿಲ್ಲ. 14 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಅವರು ಪತ್ತೆಯಾಗದ ಕಾರಣ, ವಾದಿಯು ತಮ್ಮ ತಂದೆಯ ಪತ್ತೆಗಾಗಿ ಮತ್ತೆ 3ನೇ ಪ್ರತಿವಾದಿಗೆ ಮನವಿಯನ್ನು ನೀಡಿದ್ದಾರೆ. ಅದಕ್ಕೆ 3ನೇ ಪ್ರತಿವಾದಿಯು ವಾದಿಯ ತಂದೆಯು ಪ್ರಾಮಾಣಿಕ ಪ್ರಯತ್ನಗಳ ನಂತರವೂ ಪತ್ತೆಯಾಗಿಲ್ಲ ಎಂದು ತಿಳಿಸಿದ್ದಾರೆ. ವಾದಿಯು ತಮ್ಮ ತಂದೆ ಜೀವಂತವಾಗಿರಬಹುದು ಎಂಬ ಆಸೆಯನ್ನು

ಕಳೆದುಕೊಂಡಿದ್ದಾರೆ. ಈಗ ವಾದಿಯು ಕುಟುಂಬದ ಆಸ್ತಿಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳಲು 2ನೇ ಪ್ರತಿವಾದಿಗೆ ತಂದೆಯ ಮರಣ ಪ್ರಮಾಣಪತ್ರವನ್ನು ನೀಡುವಂತೆ ಮನವಿಯನ್ನು ನೀಡಲಾಗಿರುತ್ತದೆ. ಆದರೆ 2ನೇ ಪ್ರತಿವಾದಿಯು ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಬದಲಾಗಿ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿ ಡಿಕ್ರಿ ಪಡೆಯುವಂತೆ ದೃಢೀಕರಣ ಪತ್ರವನ್ನು ನೀಡಿದ್ದಾರೆ. ಮೇಲೆ ಹೇಳಿದಂತೆ ವಾದಿಯು ಕುಟುಂಬದ ಆಸ್ತಿಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳದಿದ್ದರೆ ಮುಂದೆ ಅವರ ಕುಟುಂಬದಲ್ಲಿ ಹಲವಾರು ವ್ಯಾಜ್ಯಕ್ಕೆ ಕಾರಣಗಳುಂಟಾಗಬಹುದು ಹಾಗೂ ಅವರ ಜೀವನ ನಿರ್ವಹಣೆಗೂ ತೊಂದರೆಯುಂಟಾಗಬಹುದು ಆದ್ದರಿಂದ ಸದರಿ ದಾವೆಯನ್ನು ಹೂಡಲಾಗಿರುತ್ತದೆ. 1ನೇ ಪ್ರತಿವಾದಿಯು ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸುತ್ತಿರುವುದರಿಂದ 1ನೇ ಪ್ರತಿವಾದಿಯನ್ನು ಔಪಚಾರಿಕವಾಗಿ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಲಾಗಿರುತ್ತದೆ. ಆದ್ದರಿಂದ ವಾದಿಯು ಸದರಿ ದಾವೆ ಸಲ್ಲಿಸುವುದರ ಮೂಲಕ ವಾದಿಯ ತಂದೆಯಾದ ನಿಂಗೇಗೌಡ @ ನಿಂಗಣ್ಣ ಬಿನ್ ಲೇಟ್ ಬೋರೇಗೌಡ ಅವರು ಕಾನೂನಾತ್ಮಕವಾಗಿ ಮೃತರಾಗಿದ್ದಾರೆ ಎಂದು ಘೋಷಿಸಿ ವಾದಿಯ ತಂದೆಯ ಮರಣದ ನಮೂದನ್ನು ಜನನ ಮತ್ತು ಮರಣಗಳ ರಿಜಿಸ್ಟರ್ ನಲ್ಲಿ ದಾಖಲಿಸಿ ಪ್ರಮಾಣ ಪತ್ರವನ್ನು ನೀಡುವಂತೆ 2ನೇ ಪ್ರತಿವಾದಿಗೆ ನಿರ್ದೇಶನ ನೀಡಬೇಕೆಂದು ಕೋರಿರುತ್ತಾರೆ.

**3.** ಪ್ರತಿವಾದಿಯರಿಗೆ ನ್ಯಾಯಾಲಯದಿಂದ ದಾವಾ ಸಮನ್ಸ್ ಜಾರಿಯಾದ ನಂತರ 1 ರಿಂದ 3 ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಹಾಜರಾಗಿದ್ದರೂ ಸಹ ಪ್ರತಿವಾದಿಯರು ತಮ್ಮ ಪರ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ.

4. ವಾದಿಯ ಪರ ವಕೀಲರ ವಾದವನ್ನು ಆಲಿಸಲಾಯಿತು.

**5**. ಮೇಲ್ಕಾಣಿಸಿದ ವಾದ ಪತ್ರದ ಸಂಗತಿಗಳನ್ನು ಆಧರಿಸಿ ಈ ಕೆಳಕಾಣಿಸಿದ ಅಂಶಗಳನ್ನು ರೂಪಿಸಲಾಗಿದೆ**.**

**<u>ಅಂಶಗಳು</u>**

**1. ವಾದಿಯ ತಂದೆಯಾದ ನಿಂಗೇಗೌಡ ಉರುಫ್ ನಿಂಗಣ್ಣ ಬಿನ್ ಲೇಟ್ ಬೋರೇಗೌಡ ರವರು 2011 ರಿಂದ ನಾಪತ್ತೆಯಾಗಿದ್ದಾರೆ ಎಂಬುದನ್ನು ವಾದಿಯು ಸಾಬೀತುಪಡಿಸುತ್ತಾರೆಯೇ**

**2. ವಾದಿಯು ದಾವೆಯಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಂದು ಸಾಬೀತುಪಡಿಸುತ್ತಾರೆಯೇ?**

**3. ಯಾವ ಆದೇಶ ಅಥವಾ ಡಿಕ್ರಿ?**

**6**. ಮೇಲ್ಕಾಣಿಸಿದ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ -1 ಎಂದು ಸಾಕ್ಷಿ ಮಾಡಿಸಿಕೊಂಡಿದ್ದು, ತನ್ನ ಪರವಾಗಿ ನಿಶಾನೆ.ಪಿ-1ರಿಂದ ನಿಶಾನೆ.ಪಿ-6 ರವರೆಗೆ ದಾಖಲೆಗಳನ್ನು ಹಾಜರುಪಡಿಸಿದ್ದು, ನಿಶಾನೆಗಳಾಗಿ ಗುರ್ತಿಸಿಕೊಂಡಿರುತ್ತಾರೆ. ಪ್ರತಿವಾದಿಯರಿಗೆ ನ್ಯಾಯಾಲಯದ ಮೂಲಕ ಸಮನ್ಸ್ ಜಾರಿಗೊಳಿಸಿದ್ದು**,** ಪ್ರತಿವಾದಿಯರು ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಹಾಜರಾಗಿದ್ದರೂ ಸಹ ಪ್ರತಿವಾದಿಯರು ತಮ್ಮ ಪರ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ.

**7.** ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆಃ-

**ಅಂಶ 1 : ಸಕಾರಾತ್ಮಕವಾಗಿ.**

**ಅಂಶ 2 : ಸಕಾರಾತ್ಮಕವಾಗಿ.**

**ಅಂಶ 3 : ಅಂತಿಮ ಆದೇಶದಂತೆ**

**:: ಕಾ ರ ಣ ಗ ಳು ::**

**8. ಅಂಶ 1 ಮತ್ತು 2 ಃ** ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದಲೂ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದಲೂ ಈ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಸಾಬೀತುಪಡಿಸುವಂತಹ ಹೊಣೆಗಾರಿಕೆಯನ್ನು ವಾದಿಯು ಹೊಂದಿದ್ದು, ಸದರಿ ಅಂಶಗಳನ್ನು ಸಾಬೀತುಪಡಿಸಲು ವಾದಿಯು ನ್ಯಾಯಾಲಯದಲ್ಲಿ ಹಾಜರಾಗಿ ತನ್ನ ಪರವಾಗಿ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ನೀಡಿರುತ್ತಾರೆ.

**9**. ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ -1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ತನ್ನ ವಾದ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನೇ ಪುನರುಚ್ಚರಿಸಿರುತ್ತಾರೆ. ವಾದಿಯು ತನ್ನ ವಾದಪತ್ರ ಮತ್ತು ಪ್ರಮಾಣಪತ್ರದಲ್ಲಿ ತಿಳಿಸಿದ ಅಂಶಗಳನ್ನು ರುಜುವಾತುಪಡಿಸಲು ನಿಶಾನೆ.ಪಿ-1ರಿಂದ ನಿಶಾನೆ.ಪಿ-6ರ ದಾಖಲೆಗಳನ್ನು ಗುರುತಿಸಿಕೊಂಡಿದ್ದು. **ನಿಶಾನೆ.ಪಿ-1** ವಂಶವೃಕ್ಷದ ಪ್ರಮಾಣ ಪತ್ರವಾಗಿದ್ದು, ಸದರಿ ವಂಶವೃಕ್ಷದಲ್ಲಿ ನಿಂಗೇಗೌಡ ಉರುಫ್ ನಿಂಗಣ್ಣ ವಾದಿಯ ತಂದೆ ಎಂಬುದು ಕಂಡುಬಂದಿರುತ್ತದೆ. **ನಿಶಾನೆ.ಪಿ-2** ವಾದಿಯು ತನ್ನ ತಂದೆ ಕಾಣೆಯಾದ ಬಗ್ಗೆ ಸಿ.ಎಸ್.ಪುರ ಪೊಲೀಸ್ ಠಾಣೆಗೆ ದಿನಾಂಕ:14/12/2019 ರಂದು ದೂರನ್ನು ನೀಡಿದ್ದು, ಸದರಿ ದೂರಿನಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುವುದು ಕಂಡು ಬಂದಿರುತ್ತದೆ. **ನಿಶಾನೆ.ಪಿ-3** ಆರಕ್ಷಕ ವೃತ್ತ ನಿರೀಕ್ಷಕರ ಕಚೇರಿ, ಗುಬ್ಬಿ ರವರು ನೀಡಿರುವ ದೃಢೀಕರಣ ಪತ್ರವಾಗಿರುತ್ತದೆ, ಸದರಿ

ದಾಖಲೆಯಲ್ಲಿ ವಾದಿಯ ತಂದೆಯವರ ಪತ್ತೆ ಬಗ್ಗೆ ಎಲ್ಲಾ ಕ್ರಮಗಳನ್ನು ಕೈಗೊಂಡಿದ್ದರೂ ಅವರು ಪತ್ತೆಯಾಗದ ಕಾರಣ ಸದರಿ ಪ್ರಕರಣವು ಸದ್ಯಕ್ಕೆ ಪತ್ತೆಯಾಗದ ಪ್ರಕರಣವೆಂದು ಪರಿಗಣಿಸಿ ನಿಶ್ಚಲ ಕಡತದಲ್ಲಿಟ್ಟುರುವುದು ಕಂಡು ಬಂದಿರುತ್ತದೆ. **ನಿಶಾನೆ.ಪಿ-4** ತಹಶೀಲ್ದಾರ್ ರವರ ಕಚೇರಿ, ಗುಬ್ಬಿ ರವರು ನೀಡಿರುವ ಹಿಂಬರಹವಾಗಿರುತ್ತದೆ, ಸದರಿ ದಾಖಲೆಯಲ್ಲಿ ದಿನಾಂಕ 14-12-2019 ರಂದು ನೀಡಿರುವ ಆರಕ್ಷಕ ವೃತ್ತ ನಿರೀಕ್ಷಕರು ಗುಬ್ಬಿ ರವರು ನೀಡಿರುವ ವರದಿಯಲ್ಲಿ ಸದ್ಯಕ್ಕೆ ಪತ್ತೆಯಾದ ಕಾರಣವೆಂದು ಪರಿಗಣಿಸಿ ನಿಶ್ಚಲ ಕಡತದಲ್ಲಿರುತ್ತದೆ ಎಂದು ದೃಢೀಕರಿಸಿರುವುದರಿಂದ ಸದರಿ ಇತ್ಯರ್ಥವನ್ನು ನ್ಯಾಯಾಲಯದಲ್ಲಿ ಇತ್ಯರ್ಥಪಡಿಸಿಕೊಳ್ಳಲು ನೀಡಿರುವುದು ಕಂಡುಬಂದಿರುತ್ತದೆ. **ನಿಶಾನೆ.ಪಿ-5** ವಾದಿಯ ತಂದೆ ಕಾಣೆಯಾಗಿರುವ ಬಗ್ಗೆ ಸಿ.ಎಸ್.ಪುರ ಪೊಲೀಸ್ ಠಾಣೆಯಿಂದ ನೀಡಿರುವ ಪ್ರಕಟಣೆಯಾಗಿದೆ, ಸದರಿ ಪ್ರಕಟಣೆಯು ಸಿ.ಎಸ್. ಪುರ ಪೊಲೀಸ್ ಠಾಣೆಯವರು ವಾದಿಯ ತಂದೆಯವರನ್ನು ಪತ್ತೆ ಹಚ್ಚಲು ಪ್ರಯತ್ನ ಪಟ್ಟಿರುತ್ತಾರೆಂದು ಕಂಡು ಬಂದಿರುತ್ತದೆ. **ನಿಶಾನೆ.ಪಿ-6** ದಿನಾಂಕ 17-12-2019 ರ ಏಕೇಶ್ ಕನ್ನಡ ದಿನ ಪತ್ರಿಕೆ ಪ್ರಕಟಣೆಯಾಗಿದ್ದು, ಸದರಿ ದಿನ ಪತ್ರಿಕೆಯಲ್ಲಿ ವಾದಿಯ ತಂದೆ ಕಾಣೆಯಾದ ಬಗ್ಗೆ ಪ್ರಕಟಣೆಯಾಗಿರುವುದು ಕಂಡುಬಂದಿರುತ್ತದೆ.

**10.** ಈ ಮೇಲ್ಕಂಡ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ವಾದಿಯ ತಂದೆಯಾದ ನಿಂಗೇಗೌಡ @ ನಿಂಗಣ್ಣ ಬಿನ್ ಲೇಟ್ ಬೋರೇಗೌಡ ರವರು 2011 ರಲ್ಲಿ ಕಾಣೆಯಾಗಿರುವ ಬಗ್ಗೆ ವಾದಿಯು ಸಿ.ಎಸ್.ಪುರ ಪೊಲೀಸ್ ಠಾಣೆಗೆ ದಿನಾಂಕ:14/12/2019 ರಂದು ನಿಶಾನೆ.ಪಿ. 2 ರಂತೆ ದೂರನ್ನು ನೀಡಿದ್ದು, ಅದರಂತೆ ಸಿ.ಎಸ್.ಪುರ ಪೊಲೀಸರು ಠಾಣಾ ಮೊಕದ್ದಮೆ ಸಂಖೆ : 76/2019 ರಂತೆ ಪ್ರಕರಣವನ್ನು ದಾಖಲಿಸಿರುವುದು ಕಂಡು ಬಂದಿರುತ್ತದೆ. ವಾದಿಯು ತನ್ನ ತಂದೆ ಕಾಣೆಯಾದ ನಂತರ ಗುಬ್ಬಿ ವೃತ್ತ ನಿರೀಕ್ಷಕರಿಗೆ ಅರ್ಜಿ ನೀಡಿದ್ದು, ಸದರಿ ಯವರು ಸದ್ಯಕ್ಕೆ ಪತ್ತೆಯಾಗದ ಪ್ರಕರಣವೆಂದು ಪರಿಗಣಿಸಿ ನಿಶ್ಚಲ ಕಡತದಲ್ಲಿಡಲು ದೃಢೀಕರಣ

ಪತ್ರವನ್ನು ನಿಶಾನೆ.ಪಿ.3 ರಂತೆ, ತದನಂತರ ವಾದಿಯು ಗುಬ್ಬಿಯ ತಹಶೀಲ್ದಾರ್ ರವರಿಗೆ ತನ್ನ ತಂದೆಯ ಮರಣ ಸಮರ್ಥನಾ ಪತ್ರವನ್ನು ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದು, ತಹಶೀಲ್ದಾರ್ ರವರು ನಿಶಾನೆ.ಪಿ.4 ರಂತೆ ದಿನಾಂಕ 14-12-2019 ರಂದು ವೃತ್ತ ನಿರೀಕ್ಷಕರು ನೀಡಿರುವ ವರದಿಯ ಆಧಾರದ ಮೇಲೆ ಸದ್ಯಕ್ಕೆ ಪತ್ತೆಯಾದ ಕಾರಣವೆಂದು ಪರಿಗಣಿಸಿ ನಿಶ್ಚಲ ಕಡತದಲ್ಲಿರುತ್ತದೆ ಎಂದು ದೃಢೀಕರಿಸಿರುವುದರಿಂದ ನ್ಯಾಯಾಲಯದಲ್ಲಿ ಇತ್ಯರ್ಥಗೊಳಿಸಲಾಗಿರುತ್ತದೆ ಎಂದು ತಿಳಿಸಿ ಹಿಂಬರಹ ನೀಡಿರುವುದು ಕಂಡು ಬಂದಿರುತ್ತದೆ. ಪ್ರಸ್ತುತ ಈ ದಾವೆಯಲ್ಲಿ ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಸಹ ಪ್ರತಿವಾದಿಯರು ತಮ್ಮ ಪರ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿರುವುದಿಲ್ಲ ಹಾಗೂ ವಾದಿಯ ಸಾಕ್ಷ್ಯ ವಿಚಾರಣೆಯನ್ನು ಹಾಗೂ ದಾಖಲಾತಿಗಳನ್ನು ಅಲ್ಲಗಳೆದಿರುವುದಿಲ್ಲ.

ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 108 ರಲ್ಲಿ ತಿಳಿಸಿರುವಂತೆ ಒಬ್ಬ ವ್ಯಕ್ತಿಯು ಬದುಕಿರುವನೆ ಅಥವಾ ಮರಣ ಹೊಂದಿರುವನೇ ಎಂಬ ಪ್ರಶ್ನೆ ಇರುವಾಗ ಮತ್ತು ಅವನು ಬದುಕಿದ್ದರೆ ಸ್ವಾಭಾವಿಕವಾಗಿ ಅವನ ಬಗ್ಗೆ ಅರಿತಿರಬಹುದಾದ ವ್ಯಕ್ತಿಗಳು ಏಳು ವರ್ಷಗಳಿಂದ ಅವನ ಬಗ್ಗೆ ಯಾವ ಸುದ್ದಿಯನ್ನು ಕೇಳಿಲ್ಲವೆಂದು ಸಾಬೀತಾಗಿದ್ದರೆ ಅವನು ಬದುಕಿರುವನೆಂದು ಸಾಬೀತು ಮಾಡುವ ಭಾರವು ಆ ರೀತಿ ಹೇಳುವ ವ್ಯಕ್ತಿಯ ಮೇಲೆ ಇರುತ್ತದೆ ಎಂದು ತಿಳಿಸಿರುತ್ತದೆ. ಆದರೆ ಈ ದಾವೆಯಲ್ಲಿ ವಾದಿಯ ತಂದೆ ನಿಂಗೇಗೌಡ @ ನಿಂಗಣ್ಣ ಬಿನ್ ಲೇಟ್ ಬೋರೇಗೌಡ ರವರು 2011 ರಲ್ಲಿ ಕಾಣೆಯಾಗಿದ್ದು ಈ ಬಗ್ಗೆ ದಿನಾಂಕ 14-12-2019 ರಂದು ತನ್ನ ತಂದೆ ಕಾಣೆಯಾಗಿರುತ್ತಾರೆಂದು ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದು ಸದರಿಯವರು ವಾದಿಯ ತಂದೆ ಕಾಣೆಯಾದ ಬಗ್ಗೆ ನಿಶಾನೆ.ಪಿ. 5 ರಂತೆ ಪ್ರಕಟಣೆ ಹೊರಡಿಸಿದ್ದು ನಿಶಾನೆ.ಪಿ.6 ರಂತೆ ಪತ್ರಿಕೆಯಲ್ಲಿ ಪ್ರಕಟಣೆಗೊಂಡಿದ್ದರು ಸಹ ಇಲ್ಲಿವರೆಗೂ ಯಾರು ವಾದಿಯ ತಂದೆಯ ಬಗ್ಗೆ

ತಿಳಿಸದೇ ಇರುವುದರಿಂದ ಅವರ ಇರುವಿಕೆಯ ಬಗ್ಗೆ ಯಾವುದೇ ಸುದ್ದಿ ಇರುವುದಿಲ್ಲ ವೆಂದು ವಾದಿಯು ಸಾಬೀತುಪಡಿಸಿರುತ್ತಾರೆ ಎಂಬುದಾಗಿರುತ್ತದೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ವಾದಿಯ ತಂದೆ ನಿಂಗೇಗೌಡ @ ನಿಂಗಣ್ಣ ಬಿನ್ ಲೇಟ್ ಬೋರೇಗೌಡ ರವರು 2011 ರಿಂದ ಕಾಣೆಯಾಗಿದ್ದು ದಿನಾಂಕ 14-12-2019 ರಂದು ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದು ಈ ಬಗ್ಗೆ ಪತ್ರಿಕೆಯಲ್ಲಿ ಪ್ರಕಟಣೆಯಾದರೂ ಸಹ ಇಲ್ಲಿಯವರೆಗೂ ವಾದಿಯ ತಂದೆ ಇರುವಿಕೆಯ ಬಗ್ಗೆ ಯಾವುದೇ ಸುಳಿವು ದೊರಕಿಲ್ಲವೆಂದು ವಾದಿಯು ನಿರೂಪಿಸಿರುತ್ತಾರೆಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತಾ ವಿವಾದಾಂಶ-**1** ಮತ್ತು **2**ನ್ನು ಸಕಾರಾತ್ಮಕವೆಂದು ನಿರ್ಣಯಿಸಲಾಗಿರುತ್ತದೆ.

**11.** **<u>ವಿವಾದಾಂಶ -3 :</u>** ಈ ಮೇಲ್ಕಂಡ ಎಲ್ಲಾ ವಿವಾದಾಂಶಗಳನ್ನು ನಿರ್ಣಯಿಸಲಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**:: ಆದೇಶ ::**

**ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲಾಗಿರುತ್ತದೆ.**

**ವಾದಿಯ ತಂದೆಯಾದ ನಿಂಗೇಗೌಡ @ ನಿಂಗಣ್ಣ ಬಿನ್ ಲೇಟ್ ಬೋರೇಗೌಡ ರವರು 2011 ರಿಂದ ಕಾಣೆಯಾಗಿದ್ದು ದಿನಾಂಕ 14-12-2019 ರಂದು ದೂರನ್ನು ನೀಡಿರುವುದರಿಂದ ವಾದಿಯ ತಂದೆಯಾದ ನಿಂಗೇಗೌಡ @ ನಿಂಗಣ್ಣ ರವರು ಸುಮಾರು ಏಳು ವರ್ಷಗಳಿಗಿಂತ ಹೆಚ್ಚು ಕಾಲ ಕಾಣಿಸದೇ ಇರುವುದರಿಂದ ಈ ದಾವೆ ಹೂಡಿದರು. ದಿನಾಂಕ 06-01-2026 ರಂದು ಶ್ರೀ ನಿಂಗೇಗೌಡ @ ನಿಂಗಣ್ಣ ಬಿನ್ ಲೇಟ್ ಬೋರೇಗೌಡ ರವರು ಮರಣ ಹೊಂದಿರುತ್ತಾರೆ ಎಂದು ಈ ಮೂಲಕ ಘೋಷಿಸಲಾಗಿದೆ.**

**ಶ್ರೀ ನಿಂಗೇಗೌಡ @ ನಿಂಗಣ್ಣ ಬಿನ್ ಲೇಟ್ ಬೋರೇಗೌಡ ರವರು ದಿನಾಂಕ 06-01-2026 ರಂದು ಮರಣ ಹೊಂದಿರುತ್ತಾರೆಂದು 2ನೇ ಪ್ರತಿವಾದಿಯು ತಮ್ಮ ಕಚೇರಿಯಲ್ಲಿ ನಿರ್ವಹಿಸುತ್ತಿರುವ ರಿಜಿಸ್ಟರ್ ನಲ್ಲಿ ಕಾನೂನು ರೀತ್ಯಾ ನೋಂದಾಯಿಸಿಕೊಂಡು ಮರಣ ಪ್ರಮಾಣ ಪತ್ರವನ್ನು ನೀಡತಕ್ಕದೆಂದು ಆದೇಶಿಸಲಾಗಿದೆ.**

**ವಾದಿಯು ನಿಗದಿತ ಶುಲ್ಕವನ್ನು ಪಾವತಿಸುವ ಅಗತ್ಯವಿದ್ದಲ್ಲಿ ಸದರಿ ಶುಲ್ಕವನ್ನು ಪಾವತಿಸಿ ಮೇಲ್ಕಂಡ ಆದೇಶದಂತೆ ವಾದಿಯು ತನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಪಡೆಯಲು ಸೂಚಿಸಲಾಗಿದೆ.**

**ಈ ಪ್ರಕಾರ ಡಿಕ್ರಿ ಬರೆಯುವಂತೆ ಆದೇಶಿಸಲಾಗಿದೆ.**

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ **ದಿನಾಂಕಃ 04ನೇ ಜುಲೈ 2026** ರಂದು ನಾನು ಉದ್ಘೋಷಿಸಿದ್ದೇನೆ.)

SAVITHARANI H V

Digitally signed by SAVITHARANI H V
Date: 2026.07.04 17:17:07 +0530

(ಶ್ರೀಮತಿ ಸವಿತರಾಣಿ ಹೆಚ್.ವಿ.)
ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಗುಬ್ಬಿ.

**:: ಅನುಬಂಧ ::**

**1. ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿ ಗಳ ಪಟ್ಟಿಃ-**

ಪಿ.ಡಬ್ಲ್ಯೂ -1 : ಶ್ರೀ ಬೋರೇಗೌಡ

**2. ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

ನಿ.ಪಿ.1 : ವಂಶವೃಕ್ಷದ ಪ್ರಮಾಣ ಪತ್ರ.
ನಿ.ಪಿ.2 : ಪ್ರಥಮ ವರ್ತಮಾನ ವರದಿ
ನಿ.ಪಿ.3 : ದೃಢೀಕರಣ ಪತ್ರ

| | | |
|---|---|---|
| ನಿ.ಪಿ.4 | : | ಹಿಂಬರಹ |
| ನಿ.ಪಿ.5 | : | ಠಾಣಾ ಪ್ರಕಟಣೆ |
| ನಿ.ಪಿ.6 | : | ಏಕೇಶ್ ಕನ್ನಡ ದಿನಪತ್ರಿಕೆ |

**3. ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿ ಗಳ ಪಟ್ಟಿಃ-**

-ಇಲ್ಲ-

**4. ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

-ಇಲ್ಲ-

SAVITHARANI H V

Digitally signed by SAVITHARANI H V
Date: 2026.07.04 17:17:19 +0530

(ಶ್ರೀಮತಿ ಸವಿತರಾಣಿ ಹೆಚ್.ವಿ.)
ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಗುಬ್ಬಿ.